ಕಲಬುರಗಿಯಲ್ಲೇ ಅದರೂ ಕಾರವಾರದಲ್ಲಿ ಮತ್ತು ಬೆಂಗಳೂರಿನಲ್ಲಿ ಅದ್ದೂರಿ ರಿಸೆಪ್ಷನ್ ಇತ್ತು. ಮಗಳಿಗೆ 'ಶೈಲಿ' ಎಂದು ಹೆಸರಿಟ್ಟಿದ್ದಾರೆ.

ಕಾರವಾರದ ಸಂಕ್ರುವಾಡದಲ್ಲಿ ದೊಡ್ಡ ಮನೆ ಕಟ್ಟಿಸಿದ್ದಾರೆ. ಅದಕ್ಕೆ 'ಸುಪ್ರೀತ್ ವಿಲ್ಲಾ' ಎಂದು ಹೆಸರಿಟ್ಟಿದ್ದಾರೆ. ಊರಿಗೆ ಬಂದಾಗಲೆಲ್ಲ ಮಗಳು ಶೈಲಿ ಜೊತೆಗೆ ಬೀಚಿಗೆ ಹೋಗುತ್ತಾರೆ. ಪ್ರೀತಂನ ಹಳೆಯ ಪರಿಚಯದವರೆಲ್ಲರೂ 'ಕೆನ್ನಾ ಅಯ್ಲೋ ರೇ ಪ್ರೀತಮ್ಮು' ಎಂದು ಕೊಂಕಣಿಯಲ್ಲೂ, 'ಯಾವಾಗ ಬಂದ್ಯೋ ಪ್ರೀತಮ್ಮಾ?' ಎಂದು ಕನ್ನಡದಲ್ಲೂ ಆತ್ಮೀಯವಾಗಿ ಮಾತಾಡಿಸಿ ಹೋಗುತ್ತಾರೆ. ಚಿಕ್ಕವರೆಲ್ಲ ಇವರನ್ನು ಮುತ್ತಿಕೊಂಡು ಸೆಲ್ಫಿ ತಗೋತಾರೆ. ಪ್ರೀತಂನ ಒತ್ತಾಯಕ್ಕೆ ರೊಡ್ರಿಗ್ಸ್ ಸರ್ 'ರೊಡ್ರಿಗ್ಸ್ ಸ್ಪೋರ್ಟ್ಸ್ ಅಕಾಡೆಮಿ' ಸ್ಥಾಪಿಸಿದ್ದಾರೆ. ಉದ್ಘಾಟನೆಗೆ ಅನಿಲ್ ಕುಂಬ್ಳೆ ಅವರನ್ನು ರೋಹಿತ್ ಕರೆದುತಂದಿದ್ದ. ಅದು ಈಗ ಕಾರವಾರದ ಪ್ರತಿಭಾವಂತ ಹುಡುಗರಿಗೆ ತರಬೇತಿ ನೀಡುವ, ಅವರ ಸಾಧನೆಗೆ ಅವಕಾಶ ಮಾಡಿಕೊಡುವ ಸಂಸ್ಥೆಯಾಗಿ ಬೆಳೆದಿದೆ. ರೊಡ್ರಿಗ್ಸ್ ಸರ್ ಮಗಳು ಸಂಸ್ಥೆಯನ್ನು ಚೆನ್ನಾಗಿ ನಿರ್ವಹಿಸುತ್ತಾಳೆ. ರೋಹಿತ್ ರಣಜಿ ಟೀಮಿಗೆ ಆಯ್ಕೆ ಆದಾಗ ಇದೇ ಅಕಾಡೆಮಿಯಲ್ಲಿ ಅದ್ದೂರಿ ಸನ್ಮಾನ ಇಟ್ಟುಕೊಂಡಿದ್ದರು. ಮೂರ್ನಾಲ್ಕು ಹುಡುಗಿಯರ ಜೊತೆ ಅವನ ಅಫೇರು ನಡೆಯಿತೇ ಹೊರತು ಅವು ಮದುವೆವರೆಗೂ ಮುಂದುವರಿಯಲಿಲ್ಲ.

'ಅಂಡಾಡಿ ಗುಂಡನಂತೆ ತಿರ್ಗ್ತಿರಬೇಡ, ಚಂದ ಹುಡ್ಗಿ ನೋಡಿ ಮದ್ವ ಆಗು' ಎಂದು ಗುಲಾಬಿ ಹೇಳಿ ಹೇಳಿ ಕೊನೆಗೂ ರೋಹಿತ್ ಅಂಕೋಲಿ ಕಡೆಯ ಹುಡುಗಿಯೊಂದಿಗೆ ಅರೇಂಜ್ಡ್ ಮದುವೆ ಆಗಿ ಸೆಟ್ಲ್ ಆಗಿದ್ದಾನೆ. ಅವನಿಗೆ ಮಗ ಹುಟ್ಟಿದಾಗ ಗುಲಾಬಿ ಕೆಲವು ದಿನ ಇದ್ದು ಬಂದಿದ್ದಳು. 'ಲೈಫಲ್ಲಿ ನನ್ನ ಪ್ರೀತಿಯನ್ನಂತೂ ನೀನು ಮನ್ನಿಸಲಿಲ್ಲ, ಮದುವೆಗಾದರೂ ಬಂದು ಹೋಗು ಮಾರಾಯಾ' ಎಂಬ ಜಾಹ್ನವಿಯ ಮಾತಿಗೆ ಒಪ್ಪಿ ಶೂಟಿಂಗಿನಲ್ಲಿದ್ದ ಪ್ರೀತಂ ಹೈದರಾಬಾದಿನಿಂದ ಫ್ಲೈಟಲ್ಲಿ ಗೋವೆಗೆ ಬಂದು, ಮದುವೆ ಅಟೆಂಡ್ ಮಾಡಿ ಹೋಗಿದ್ದ. ಗುಲಾಬಿ 'ಮೀನುಗಾರ ಮಹಿಳೆಯರ ಕಲ್ಯಾಣ ಸಂಸ್ಥೆ' ಕಟ್ಟಿ ಬಡವರಿಗೆಲ್ಲ ನೆರವಾಗ್ತಾಳೆ. ಮೊನ್ನೆ ಆ ಹೆಸರು 'ಮೀನುಗಾರ್ತಿಯರ ಕಲ್ಯಾಣ ಸಂಘ' ಎಂದು ಬದಲಾಗಿದೆ. ಕಡಲ ಪಕ್ಕದ ತನ್ನ ಮನೆಯಲ್ಲೇ ಸಂಸ್ಥೆಯ ವಿವಿಧ ಚಟುವಟಿಕೆಗಳಿಗೆ ಅವಕಾಶ ನೀಡಿದ್ದಾಳೆ. 'ಸುಪ್ರೀತ್ ವಿಲ್ಲಾ'ದಲ್ಲಿದ್ದರೂ ದಿನಕ್ಕೊಮ್ಮೆಯಾದರೂ ಇಲ್ಲಿಗೆ ಬಂದು ಚಿಟ್ಟೆ ಮೇಲಿಂದ ಕಡಲ ಭೋರ್ಗರೆತದ ತರಂಗಗಳನ್ನು ಆಲಿಸಿ ಹೋಗದಿದ್ದರೆ ಆಕೆಗೆ ಸಮಾಧಾನವಿಲ್ಲ. ಕಾರವಾರಕ್ಕೆ ಬಂದಾಗ ಪ್ರೀತಂ ಮತ್ತು ಸುಮಿ ಕೂಡ ಈ ಹಳೆ ಮನೆಗೆ ಬರುತ್ತಾರೆ. ಇಲ್ಲಿ ಬಂದಾಗ ಅವರಲ್ಲಿ ಏನೋ ಹೊಸತನ ಚಿಗುರುತ್ತದೆ. ಪ್ರೀತಂನ ಸೈಕಲ್ಲು ಹಿಂದಿನ ಗೋಡೆಗೆ ಚಾಚಿದ್ದು ಹಾಗೇ ಇದೆ. 'ಬೆಲ್ ಬಿಟ್ಟರೆ ಬಾಕಿಯೆಲ್ಲವೂ ಸೌಂಡು ಮಾಡುತ್ತವಲ್ಲೋ' ಎಂದು ಸುಮಿ ಯಾವಾಗಲೂ ಛೇಡಿಸುತ್ತಿದ್ದ ಆ ಸೈಕಲ್ಲು ಈಗ ಗೋಡೆಗೆ ಬರೆದ ಚಿತ್ತಾರದಂತೆ ಕಾಣಿಸುತ್ತದೆ.

'ಪ್ರೀತಂ, ಡಿಪ್ಲೊಮೊ 2' ಎಂದು ಸೈಕಲ್ ಮೇಲೆ ಬರೆದುಕೊಂಡ ಆ ಹೆಸರು ಕಲಾಕೃತಿಯೊಂದರ ಮೇಲೆ ಕಲಾವಿದನ ರುಜುವಿನ ಹಾಗೆ ಅನಿಸುತ್ತಿದೆ. ಪ್ರೀತಂನ ಪಾತಿ ದೋಣಿ ಪಕ್ಕದ ಮಾಡಿನಲ್ಲಿ ಸುರಕ್ಷಿತವಾಗಿದೆ. ಆದರೆ ನೆಲದ ಮೇಲೆ ಅದೆಷ್ಟೇ ಸುರಕ್ಷಿತವಾಗಿದ್ದರೂ ದೋಣಿ ತೇಲುತ್ತಿರಬೇಕಾದದ್ದು ಅಲೆಗಳ ಮೇಲೆ ಅನಿಸಿ ಪ್ರೀತಂ ಅದನ್ನು ಬೇಕಾದವರಿಗೆ ಕೊಟ್ಟುಬಿಡುವ ವಿಚಾರ ಮಾಡಿದ್ದ. ಸುಮಿಯೇ ಬೇಡ ಅಂದಿದ್ದಳು. 'ಈ ದೋಣಿ ಮೇಲೆ ಧ್ಯಾನಸ್ಥ ಸ್ಥಿತಿಯಲ್ಲಿ ಕೂತಿರುವ ಹುಡುಗನನ್ನು ಇನ್ನೊಮ್ಮೆ ಕಾಣುವ ಆಸೆ ಮಾರಾಯ' ಎಂದಿದ್ದಳು. 'ನಂಗೂ ಈ ದೋಣಿಯಲ್ಲಿ ತೇಲುತ್ತಾ ಬೇಲೆಯಲ್ಲಿ ಪ್ರತ್ಯಕ್ಷವಾಗುವ ದೇವತೆಯನ್ನು ಮತ್ತೊಮ್ಮೆ ಕಣ್ತುಂಬಿಕೊಳ್ಳಬೇಕು ಎಂಬಾಸೆಯಿದೆ' ಎಂದು ಪ್ರೀತಂನೂ ಹೇಳಿದ್ದ. 'ನಾನಿಲ್ಲಿ ಸುರಕ್ಷಿತ ಆಗಿರಬಹುದು. ಆದರೆ ಉಳಿಪೆಟ್ಟು ತಿಂದು ನನ್ನನ್ನು ಮಾಡಿದ್ದು ಇಂಥ ಸುರಕ್ಷಿತ ನೆಮ್ಮದಿಗಲ್ಲ. ನದಿಯಲ್ಲಿ ಬಿಡಿ. ನನಗೂ ಅಲೆಗಳ ಮೇಲೆ ತೇಲುವಾಸೆ' ಎಂದು ಆಕಾಶದತ್ತ ತುದಿಮುಖ ಮಾಡಿರುವ ದೋಣಿ ಆರ್ತತೆಯ ಭಾವದಲ್ಲಿದ್ದಂತೆ ಭಾಸವಾಗುತ್ತದೆ. ಒಮ್ಮೆ ಶೈಲಿ ಎಲ್ಲೂ ಕಾಣದೇ ಇದ್ದಾಗ ಹುಡುಕಾಡಿದರೆ, ದೋಣಿ ಹತ್ತಿ ಅದನ್ನು ಮುನ್ನಡೆಸುತ್ತಿರುವ ಆಟ ಆಡುತ್ತಿದ್ದಳು. ದೋಣಿಗೂ ರೋಮಾಂಚನವಾಗಿ ಅಲೆಗಳನ್ನು ಹಾಯುವಂತೆ ಹಗುರಾಗಿ ಕಂಪಿಸುತ್ತಿತ್ತು. ಪ್ರೀತಂ 'ನಾಳೆ ನಿನಗೆ ಕಾಳಿ ನದಿಯಲ್ಲಿ ದೋಣಿ ನಡೆಸಲು ಕರೆದೊಯ್ಯುವೆ' ಎಂದು ಭರವಸೆ ಕೊಟ್ಟಾಗಲೇ ಶೈಲಿ ಪಾತಿದೋಣಿಯಿಂದ ಇಳಿದಿದ್ದಳು.

'ಕೊಟ್ಟ ಮಾತು ಉಳಿಸಿಕೋ ಪ್ರೀತ್, ನಂಗೆ ದೋಣಿ ಮ್ಯಾಲೆ ಕಾಳಿ ಉಗಮ ಸ್ಥಾನ ತೋರಿಸ್ತೀನಿ, ಅಂತ ಮಾತು ಕೊಟ್ಟು ಮರೆತಬಿಟ್ಟೆ ನೀ' ಎಂದಳು ಸುಮಿ. 'ನೆಕ್ಸ್ಟ ಟೈಮ್ ಕಟ್ ಟು ಕಾಳಿ ನದಿ ಸೀನ್ಸ್, ಪಕ್ಕಾ' ಅಂದ. 'ನಿನ್ನ ಈ ಫಿಲ್ಮೀ ಪರಿಭಾಷೆಯ ಪ್ರಾಮಿಸ್ ಬಿಡು. ಲೈಫನ್ನೂ ಯಾವುದೋ ಸ್ಕ್ರಿಪ್ಟ್ ಥರ ಜೀವಿಸಬೇಡ ಮಾರಾಯ' ಅಂದಳು. 'ತಾಯಿ ಶರಣು, ನಾಳೇನೆ ಕಾಳಿ ನದಿಯಲ್ಲಿ ನಮ್ಮ ದೋಣಿಯಾನ ಆಯ್ತಾ?' ಎಂದ. ಶೈಲಿ ಖುಷಿಯಾಗಿ ಆ ಸುದ್ದಿಯನ್ನು ಅಜ್ಜಿಗೆ ತಿಳಿಸಲು ಕುಣಿಯುತ್ತಾ ಅಂಗಳಕ್ಕೆ ಓಡಿದಳು! ಶೈಲಿಯ ಪುಟ್ಟ ಪಾದಗಳ ಗೆಜ್ಜೆ ನಾದವು ಅಂಗಳದಂಚಿನ ತುಳಸಿ ಕುಡಿಗಳನ್ನೂ ಬಾಳೆ ಗಿಡಗಳನ್ನು ದಾಟಿ, ತೆಂಗಿನ ಮರ ಸಾಲುಗಳ ನಡುವಿಂದ ಸಮುದ್ರದತ್ತ ಚಲಿಸಿತು. ನೀಲಿ ನೀಲಿ ಕಡಲು ತನ್ನ ಎಂದಿನ ಲಹರಿಯಲ್ಲಿ ಭೋರ್ಗರೆಯುತ್ತಿತ್ತು!

(ಮುಗಿಯಿತು)

ಪ್ರತಿಕ್ರಿಯಿಸಿ: feedback@sudha.co.in




## ಹೊಸ ಧಾರಾವಾಹಿ

ಪುರಾಣದ ಯಾವುದಾದರೊಂದು ಭಾಗವನ್ನು ಎತ್ತಿಕೊಳ್ಳುವ ಮಹಾಕವಿಯೊಬ್ಬ, ಅದಕ್ಕೆ ಮೂಲಕಥನದ ಚೌಕಟ್ಟಿನಿಂದ ಬಿಡುಗಡೆ ಕಲ್ಪಿಸಿ ಸ್ವತಂತ್ರ ವ್ಯಕ್ತಿತ್ವ ಕಲ್ಪಿಸಿರುವ ಉದಾಹರಣೆಗಳು ಸಮೃದ್ಧವಾಗಿ ಬೆಳೆದಿರುವ ಎಲ್ಲ ದೇಶ–ಭಾಷೆಗಳಲ್ಲೂ ಇವೆ. ಅಂಥದೊಂದು ಸೃಜನಶೀಲ ಸೃಷ್ಟಿ 'ಚಿತ್ರಾಂಗದಾ'. ಮಹಾಭಾರತದ ಅಗಣಿತ ಪಾತ್ರಗಳಲ್ಲಿ ಕೋಲ್ಮಿಂಚಿನಂತೆ ಸುಳಿದುಹೋಗುವ ಮಣಿಪುರದ ಯುವರಾಣಿ ಚಿತ್ರಾಂಗದೆ, ಕುವೆಂಪು ಅವರನ್ನು ಸೆಳೆದಿದ್ದಾಳೆ. ಅರ್ಜುನ ಮತ್ತು ಚಿತ್ರಾಂಗದೆಯ ಪ್ರೇಮಕಥೆಯನ್ನು ಕುವೆಂಪು ಸ್ವತಂತ್ರ ಕೃತಿಯಂತೆ ಚಿತ್ರಿಸಿದ್ದಾರೆ. ಸರಳ ರಗಳೆಯಲ್ಲಿನ ಈ ಪ್ರೇಮಕಾವ್ಯ ಮುಂದಿನ 'ಶ್ರೀರಾಮಾಯಣ ದರ್ಶನಂ' ಮಹಾಸಾಹಸಕ್ಕೆ ಮುನ್ನುಡಿಯಂತಿದೆ.

ಆರು ಪರ್ವಗಳ ದೀರ್ಘ ಕಾವ್ಯವಾದ 'ಚಿತ್ರಾಂಗದಾ' ಕುವೆಂಪು ಅವರ ಅಪೂರ್ವ ಸೃಷ್ಟಿಗಳಲ್ಲೊಂದು. ಕುವೆಂಪು ವಿರಚಿತ ಪ್ರೇಮಕಥನವನ್ನು ಹೊಸಗಾಲದ ಓದುಗರಿಗೆ ಸುಲಭಗ್ರಾಹ್ಯವಾಗುವಂತೆ ಜಿ. ಕೃಷ್ಣಪ್ಪನವರು ಸರಳಗನ್ನಡದಲ್ಲಿ ನಿರೂಪಿಸಿದ್ದಾರೆ. ಈ ಪ್ರಯತ್ನ 'ಯುಗದ ಕವಿ ಜಗದ ಕವಿ' ಕುವೆಂಪು ಅವರನ್ನು ಹೊಸ ತಲೆಮಾರಿಗೆ ಆಪ್ತವಾಗಿಸುವ ಪ್ರಯತ್ನವಾಗಿರುವಂತೆಯೇ, ಕನ್ನಡದ ಸಾಹಿತ್ಯದ ವಿಶಿಷ್ಟ ಕೃತಿಯೊಂದನ್ನು ಸಹೃದಯರಿಗೆ ಪರಿಚಯಿಸುವ ಮೋಹಕ ಪ್ರಯತ್ನವೂ ಆಗಿದೆ.

## ಮುಂದಿನ ವಾರ ಆರಂಭ